## ಅನುಬಂಧ - 6

### ಗೈಡೆನ್ಸ್ ನೋಟ್: ಹೂಡಿಕೆದಾರರು ಎಕ್ಸ್ ಚೇಂಜ್‌ನಲ್ಲಿ (ಗಳಲ್ಲಿ) ಟ್ರೇಡ್ ಮಾಡುವಾಗ ಬೇಕು-ಬೇಡಗಳು

ನೀವು ಟ್ರೇಡ್ ಮಾಡುವ ಮುನ್ನ

1. ನೀವು SEBI ನೋಂದಾಯಿತ ಮಧ್ಯವರ್ತಿಗಳ ಮೂಲಕ ಮಾತ್ರವೇ ವ್ಯವಹರಿಸುತ್ತಿದ್ದೀರಿ ಎಂಬುದನ್ನು ಖಚಿತಪಡಿಸಿಕೊಳ್ಳಿ. ಅವರ SEBI ನೋಂದಾವಣಿ ಪ್ರಮಾಣಪತ್ರದ ನಂಬರನ್ನು ಸ್ಟಾಕ್ ಎಕ್ಸ್ ಚೇಂಜ್/ www.exchange.com ಮತ್ತು www.sebi.gov.in ವೆಬ್-ಸೈಟುಗಳಲ್ಲಿ ಲಭ್ಯವಿರುವ ಪಟ್ಟಿಯ ಜೊತೆ ಪರಿಶೀಲಿಸಿ.
2. KYC ಫಾರಂ ಸಂಪೂರ್ಣವಾಗಿ ಭರ್ತಿ ಮಾಡಿ ಮತ್ತು ಖಾಲಿ ಸ್ಥಳಗಳನ್ನು ಹೊಡೆದು ಹಾಕಿ.
3. ಹಕ್ಕುಗಳು ಮತ್ತು ಬಾಧ್ಯತೆಗಳು,ಅಪಾಯ ಬಹಿರಂಗಪಡಿಸುವ ಪತ್ರ, ಸ್ಟಾಕ್ ಬ್ರೋಕರನ ಪಾಲಿಸಿ ಮತ್ತು ಕಾರ್ಯನೀತಿ ಪತ್ರ, ಹೀಗೆ ಎಲ್ಲ ಕಡ್ಡಾಯ ಪತ್ರಗಳನ್ನೂ ಖಚಿತವಾಗಿ ಓದಿ.
4. ನಿಮ್ಮ ಮತ್ತು ಸ್ಟಾಕ್ ಬ್ರೋಕರ್ ನಡುವೆ ಸ್ವಯಂಪ್ರೇರಿತ ಕಲಮುಗಳ ಏನಾದರೂ ಒಪ್ಪಂದವಾಗಿದ್ದರೆ ಅವುಗಳನ್ನು ತಪ್ಪದೇ ಓದಿ, ಅರ್ಥ ಮಾಡಿಕೊಳ್ಳಿ ನಂತರ ಸಹಿಹಾಕಿ. ನಿಮ್ಮಿಬ್ಬರ ನಡುವೆ ಆದ ಒಪ್ಪಂದದ ಕಲಮುಗಳನ್ನು ನಿಮ್ಮ ಒಪ್ಪಿಗೆ ಇಲ್ಲದೇ ಬದಲಿಸುವಂತಿಲ್ಲ ಎಂಬುದನ್ನು ನೆನಪಿಡಿ.
5. ನೀವು ಟ್ರೇಡಿಂಗ್ ಮಾಡಿದ್ದಕ್ಕೆ ಸ್ಟಾಕ್ ಬ್ರೋಕರ್ ವಿಧಿಸುವ ಎಲ್ಲ ಬ್ರೋಕರೇಜ್, ಕಮಿಷನುಗಳು, ಶುಲ್ಕಗಳು ಮತ್ತು ಇತರ ವೆಚ್ಚಗಳ ಮತ್ತು ಅವುಗಳ ಬಗ್ಗೆ SEBI/ಸ್ಟಾಕ್ ಎಕ್ಸ್ ಚೇಂಜುಗಳು ನೀಡಿರುವ ಉಪಬಂಧಗಳು/ ಮಾರ್ಗದರ್ಶಕಗಳ ಬಗ್ಗೆ ಒಂದು ಸ್ಪಷ್ಟವಾದ ಕಲ್ಪನೆ ಹೊಂದಿರಿ.
6. ನೀವು ಸಹಿ ಹಾಕಿರುವ ಎಲ್ಲ ಕಾಗದಪತ್ರಗಳ ನಕಲನ್ನು ಸ್ಟಾಕ್ ಬ್ರೋಕರನಿಂದ ಉಚಿತವಾಗಿ ಪಡೆಯಿರಿ.
7. ಒಂದ ವೇಳೆ ನೀವು ಸ್ಟಾಕ್ ಬ್ರೋಕರ್‌ಗೆ ನಿಮ್ಮ ಬ್ಯಾಂಕ್ ಖಾತೆ ಮತ್ತು ಡಿಮ್ಯಾಟ್ ಖಾತೆಯನ್ನು ಆಪರೇಟ್ ಮಾಡಲು ಪವರ್ ಆಫ್ ಅಟಾರ್ನಿ (POA) ಜಾರಿ ಮಾಡಲು ಬಯಸಿದರೆ ದಯವಿಟ್ಟು SEBI/ ಎಕ್ಸ್ ಚೇಂಜುಗಳು ಈ ಬಗ್ಗೆ ನೀಡುವ ಮಾರ್ಗದರ್ಶಕಗಳನ್ನು ಪರಾಮರ್ಶಿಸಿ.

ವ್ಯವಹಾರಗಳು ಮತ್ತುಇತ್ಯರ್ಥಗಳು

8. ನೀವು ಲಿಖಿತ ರೂಪದಲ್ಲಿ ನಿರ್ದಿಷ್ಟವಾಗಿ ಅಧಿಕಾರ ನೀಡಿದರೆ ಸ್ಟಾಕ್ ಬ್ರೋಕರ್ ಇಲೆಕ್ಟ್ರಾನಿಕ್ ಕಾಂಟ್ರ್ಯಾಕ್ಟ್ ನೋಟ್‌ಗಳನ್ನು (ECN) ನೀಡಬಹುದು. ಅದಕ್ಕಾಗಿ ನೀವು ಸ್ಟಾಕ್ ಬ್ರೋಕರಿಗೆ ನಿಮ್ಮ ಇಮೇಲ್ ಐಡಿ ನೀಡಬೇಕು. ಕಂಪ್ಯೂಟರುಗಳ ಜೊತೆ ಕೆಲಸ ಮಾಡಿ ಅನುಭವ ಇಲ್ಲದಿದ್ದರೆ ಇಸಿಎನ್ ಆಯ್ಕೆಬೇಡ.
9. ನಿಮ್ಮ ಇಂಟರ್‌ನೆಟ್ ಟ್ರೇಡಿಂಗ್ ಖಾತೆಯ ಪಾಸ್‌ವರ್ಡನ್ನು ಯಾರೊಂದಿಗೂ ಹಂಚಿಕೊಳ್ಳಬೇಡಿ.
10. ಸ್ಟಾಕ್ ಬ್ರೋಕರಿಗೆ ನಗದಲ್ಲಿ ಏನನ್ನೂ ಪಾವತಿಸಬೇಡಿ.
11. ಸ್ಟಾಕ್ ಬ್ರೋಕರ್ ಹೆಸರಿಗೆ ಅಕೌಂಟ್ ಪೇಯೀ ಚೆಕ್ ಮೂಲಕ ಪಾವತಿಸಿ. ಸಬ್-ಬ್ರೋಕರ್ ಹೆಸರಿಗೆ ಚೆಕ್ ಬರೆಯಬೇಡಿ. ಸ್ಟಾಕ್ ಬ್ರೋಕರಿಗೆ ಮಾಡಿದ ಪಾವತಿ/ಸೆಕ್ಯುರಿಟಿ ಜಮಾಗಳಿಗೆ ದಾಖಲೆಗಳನ್ನು ರುಜುವಾತಾಗಿ ಇರಿಸಿಕೊಳ್ಳುವುದನ್ನು ಮರೆಯಬೇಡಿ. ಅದರಲ್ಲಿ ಈ ವಿವರಗಳಿರಲಿ. ಆರಂಭದ ದಿನ, ಸ್ಕ್ರಿಪ್, ಪ್ರಮಾಣ, ಆ ಹಣ/ಸೆಕ್ಯುರಿಟಿಯನ್ನು ಯಾವ ಬ್ಯಾಂಕ್/ಡಿಮ್ಯಾಟ್ ಖಾತೆಗೆ ಮತ್ತು ಯಾವ ಬ್ಯಾಂಕಿನ/ಡಿಮ್ಯಾಟ್ ಖಾತೆಯಿಂದ ಜಮಾ ಮಾಡಲಾಗಿದೆ.

12. ಟ್ರೇಡ್ ಪರಿಶೀಲನೆ ಸೌಲಭ್ಯ ಸ್ಟಾಕ್ ಎಕ್ಸ್ ಚೇಂಜುಗಳ ಜಾಲತಾಣಗಳಲ್ಲಿ ಲಭ್ಯವಿರುತ್ತದೆ. ಇದರಲ್ಲಿ ಕಾಂಟ್ರ್ಯಾಕ್ಟ್ ನೋಟಿನಲ್ಲಿ ಹೇಳಿರುವ ಟ್ರೇಡ್ ವಿವರಗಳನ್ನು ಪರಿಶೀಲಿಸಬಹುದು. ಅವು ಪರಸ್ಪರ ತಾಳೆಯಾಗದಿದ್ದರೆ ತಕ್ಷಣವೇ ಸಂಬಂಧ ಪಟ್ಟಸ್ಟಾಕ್ ಎಕ್ಸ್ ಚೇಂಜಿನ ಹೂಡಿಕೆದಾರರ ದೂರುಗಳ ವಿಭಾಗವನ್ನು ಸಂಪರ್ಕಿಸಿ.

13. ಒಂದು ವೇಳೆ ನೀವು ನಿಮ್ಮ ಖಾತೆಯನ್ನು ನಿರ್ವಹಿಸಲು ನಿರ್ದಿಷ್ಟ ಅಧಿಕಾರವನ್ನು ನೀಡಿದರೆ, ನಿಧಿಗಳ ಪೇಔಟ್ ಅಥವಾ ಸೆಕ್ಯುರಿಟೀಸ್ ಡೆಲಿವರಿ(ಸಂದರ್ಭಾನುಸಾರ)ಯನ್ನು ಎಕ್ಸ್ ಚೇಂಜಿನಿಂದ ಪೇಔಟ್ ಸ್ವೀಕರಿಸಿದ ಒಂದು ಕೆಲಸದ ದಿನದ ಒಳಗಾಗಿ ನಿಮಗೆ ಮಾಡಲಾಗದಿರಬಹುದು. ನಿಮ್ಮ ಖಾತೆಯನ್ನು ನಿರ್ವಹಿಸುವ ಸ್ಟಾಕ್ ಬ್ರೋಕರ್ ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟಿರುತ್ತಾನೆ:

    a) ಅಂತಹ ಅಧಿಕಾರ ನೀಡುವಿಕೆಗೆ ದಿನಾಂಕ ಹಾಕಿ ನೀವು ಸಹಿ ಮಾಡಿರಬೇಕು ಮತ್ತು ಅಧಿಕಾರವನ್ನು ನೀವು ಯಾವುದೇ ಸಮಯದಲ್ಲಿ ರದ್ದು ಮಾಡಬಹುದೆಂಬ ಕಲಮನ್ನು ಹೊಂದಿರಬೇಕು.
    b) ಸ್ಟಾಕ್ ಬ್ರೋಕರ್, ನಿಧಿಗಳು ಮತ್ತು ಸೆಕ್ಯುರಿಟಿಗಳ ವಾಸ್ತವ ಇತ್ಯರ್ಥವನ್ನು ಕ್ಯಾಲೆಂಡರ್ ತ್ರೈಮಾಸಿಕ ಅಥವಾ ತಿಂಗಳಲ್ಲಿ ಕನಿಷ್ಠ ಒಮ್ಮೆಯಾದರೂ ಮಾಡಬೇಕು, ಇದು ನಿಮ್ಮ ಆಯ್ಕೆಯನ್ನು ಅವಲಂಬಿಸಿರುತ್ತದೆ. ಹಾಗೆ ಇತ್ಯರ್ಥ ಮಾಡುವಾಗ ಸ್ಟಾಕ್ ಬ್ರೋಕರ್ ನಿಮಗೆ ಗ್ರಾಹಕನ ಖಾತೆ ಪುಸ್ತಕದಿಂದ 'ಸ್ಟೇಟ್ಮೆಂಟ್ ಆಫ್ ಅಕೌಂಟ್ಸ್' ಹಾಳೆಯ ಪ್ರತಿಯನ್ನು ಮತ್ತು ರಿಜಿಸ್ಟರ್ ಆಫ್ ಸೆಕ್ಯುರಿಟೀಸ್ ಪ್ರತಿಯನ್ನು ಕಳುಹಿಸುತ್ತಾನೆ; ಇದರಲ್ಲಿ ನಿಧಿಗಳ ಮತ್ತು ಸೆಕ್ಯುರಿಟಿಗಳ ರಸೀತಿಗಳು/ಡೆಲಿವರಿಗಳ ಎಲ್ಲ ಸ್ವೀಕಾರಗಳು/ ಡೆಲಿವರಿಗಳನ್ನು ತೋರಿಸಲಾಗಿರುತ್ತದೆ. ಈ ಹೇಳಿಕೆಯು ನಿಧಿಗಳು ಮತ್ತು ಸೆಕ್ಯುರಿಟಿಗಳನ್ನು ಏನಾದರೂ ಉಳಿಸಿಕೊಂಡಿರುವುದರ ವಿವರಗಳನ್ನೂ ಹೊಂದಿರುತ್ತವೆ.
    c) ಇತ್ಯರ್ಥದ ದಿನ, ಸ್ಟಾಕ್ ಬ್ರೋಕರ್ ಬಾಕಿ ಉಳಿದಿರುವ ಬಾಧ್ಯತೆಗಳಿಗೆಂದು ಅಗತ್ಯವಾದ ಸೆಕ್ಯುರಿಟಿಗಳು/ನಿಧಿಗಳನ್ನು ಉಳಿಸಿಕೊಂಡಿರಬಹುದು ಮತ್ತು ಮುಂದಿನ 5 ಟ್ರೇಡಿಂಗ್ ದಿನಗಳಲ್ಲಿ ಕೊಡಬೇಕಾಗಬಹುದಾದ ಡೆರಿವೇಟೀವ್ಸ್ ಮಾರ್ಜಿನ್ ಹೊಣೆಗಳಿಗೆ ಅಗತ್ಯವಾದ ನಿಧಿಗಳನ್ನೂ ಉಳಿಸಿಕೊಳ್ಳಬಹುದು. ಇದನ್ನು ಸ್ಟಾಕ್ ಎಕ್ಸ್ ಚೇಂಜ್ ನಿರ್ದಿಷ್ಟಪಡಿಸುವ ವಿಧಾನದಲ್ಲಿ ಲೆಕ್ಕ ಮಾಡಲಾಗುತ್ತದೆ. ನಗದು ಮಾರುಕಟ್ಟೆ ವ್ಯವಹಾರಗಳಾದರೆ ಸ್ಟಾಕ್ ಬ್ರೋಕರ್ ಗ್ರಾಹಕನಿಂದ ಇತ್ಯರ್ಥದ ದಿನ ಮತ್ತು ಮುಂದಿನ ವ್ಯವಹಾರದ ದಿನ ಬರಬೇಕಾದ ನಿಧಿಗಳ ಮತ್ತು ಸೆಕ್ಯುರಿಟಿಗಳ ಇಡೀ ಪೇ-ಇನ್ ಬಾಧ್ಯತೆಗಳನ್ನು ಉಳಿಸಿಕೊಳ್ಳಬಹುದು. ಹೀಗೆ ಉಳಿಸಿಕೊಳ್ಳುವ ನಿಧಿಗಳು/ ಸೆಕ್ಯುರಿಟಿಗಳು/ ಮಾರ್ಜಿನ್‌ಗಳ ಮೌಲ್ಯ, ನಗದು ಮಾರುಕಟ್ಟೆಯಲ್ಲಿ ಅಂತಹ ಇತ್ಯರ್ಥವಾಗುವ ದಿನ ನಡೆಸಲಾಗುವ ವ್ಯವಹಾರಗಳ ಮೌಲ್ಯದಷ್ಟಿರುತ್ತದೆ.
    d) ಸ್ಟೇಟ್ಮೆಂಟ್ ಆಫ್ ಅಕೌಂಟ್ ಅಥವಾ ಇತ್ಯರ್ಥದ ಬಗ್ಗೆ ಏನಾದರೂ ತಗಾದೆ ಇದರೆ ಅದನ್ನು ಸ್ಟಾಕ್ ಬ್ರೋಕರನ ಗಮನಕ್ಕೆ ತರಬೇಕು. ಇದನ್ನು ನಿಧಿ/ಸೆಕ್ಯುರಿಟಿಗಳು ಅಥವಾ ಹೇಳಿಕೆ (ಸಂದರ್ಭಾನುಸಾರ) ಸ್ವೀಕಾರವಾದ ದಿನಾಂಕದಿಂದ 7 (ಏಳು) ಕೆಲಸದ ದಿನಗಳ ಒಳಗೆ ಲಿಖಿತವಾಗಿ ತಿಳಿಸಬೇಕು. ವ್ಯಾಜ್ಯಗಳಿದ್ದರೆ ತಡಮಾಡದೇ ಸಂಬಂಧಪಟ್ಟ ಸ್ಟಾಕ್ ಎಕ್ಸ್ ಚೇಂಜಿನ ಹೂಡಿಕೆದಾರರ ದೂರು ಕೋಶಕ್ಕೆ ಲಿಖಿತವಾಗಿ ವಿಷಯ ತಿಳಿಸಿ.

14. ಒಂದು ವೇಳೆ ನೀವು ನಿಮ್ಮ ಖಾತೆಯನ್ನು ನಿರ್ವಹಿಸಲು ನಿರ್ದಿಷ್ಟ ಅಧಿಕಾರವನ್ನು ನೀಡಿರದಿದ್ದರೆ, ನಿಧಿಗಳ ಪೇಔಟ್ ಅಥವಾ ಸೆಕ್ಯುರಿಟೀಸ್ ಡೆಲಿವರಿ(ಸಂದರ್ಭಾನುಸಾರ)ಯನ್ನು ಎಕ್ಸ್ ಚೇಂಜಿನಿಂದ ಪೇಔಟ್ ಸ್ವೀಕರಿಸಿದ ಒಂದು ಕೆಲಸದ ದಿನದ ಒಳಗಾಗಿ ನಿಮಗೆ ಮಾಡದಿದ್ದರೆ ದಯವಿಟ್ಟು ವಿಷಯವನ್ನು ಸ್ಟಾಕ್ ಬ್ರೋಕರ್ ಗಮನಕ್ಕೆ ತನ್ನಿ. ಏನಾದರೂ ವ್ಯಾಜ್ಯವಿದ್ದರೆ ತಕ್ಷಣವೇ ಸಂಬಂಧ ಪಟ್ಟಸ್ಟಾಕ್ ಎಕ್ಸ್ ಚೇಂಜಿನ ಹೂಡಿಕೆದಾರರ ದೂರು ವಿಭಾಗಕ್ಕೆ ಲಿಖಿತ ದೂರನ್ನು ಸಲ್ಲಿಸಿ.

15. ನಿಮ್ಮ ಮೊಬೈಲ್ ಸಂಖ್ಯೆ ಮತ್ತು ಇಮೇಲ್ ಐಡಿಯನ್ನು ಸ್ಟಾಕ್ ಬ್ರೋಕರ್‌ನೊಂದಿಗೆ ನೋಂದಾಯಿಸಿ. ದಿನದ ಕೊನೆಗೆ ಸ್ಟಾಕ್ ಎಕ್ಸ್ ಚೇಂಜ್ ಟ್ರೇಡ್ ಧೃಢೀಕರಣ ಎಚ್ಚರಿಕೆಗಳು/ ವ್ಯವಹಾರಗಳ ವಿವರಗಳನ್ನು ಎಸ್ಸೆಮೆಸ್ ಅಥವಾ ಇಮೇಲ್ ಮೂಲಕ ಕಳುಹಿಸಲು ಸಾಧ್ಯವಾಗುತ್ತದೆ.

## ಟ್ರೇಡಿಂಗ್ ಸದಸ್ಯತ್ವ ಕೊನೆಗೊಳಿಸುವ ಸಂದರ್ಭದಲ್ಲಿ

16. ಒಂದ ವೇಳೆ ಸ್ಟಾಕ್ ಬ್ರೋಕರ್ ತನ್ನ ಸದಸ್ಯತ್ವ ಬಿಟ್ಟುಬಿಟ್ಟರೆ, ಸದಸ್ಯತ್ವದಿಂದ ಉಚ್ಚಾಟಿಸಲ್ಪಟ್ಟರೆ ಅಥವಾ ತಪ್ಪಿತಸ್ಥನೆಂದು ಘೋಷಣೆಯಾದರೆ, ಸ್ಟಾಕ್ ಎಕ್ಸ್ ಚೇಂಜ್ ಒಂದು ಸಾರ್ವಜನಿಕ ನೋಟಿಸನ್ನು ನೀಡಿ ಹೂಡಿಕೆದಾರರಿಂದ 'ಟ್ರೇಡಿಂಗ್ ವ್ಯವಸ್ಥೆಯಲ್ಲಿ ನಡೆದ ವ್ಯವಹಾರ'ಗಳಿಗೆ ಸಂಬಂಧಿಸಿದ ಕ್ಲೇಮುಗಳನ್ನು ಮಾತ್ರ ಆಹ್ವಾನಿಸುತ್ತದೆ. ನೀವು ಸಂಬಂಧ ಪಟ್ಟ ಎಕ್ಸ್ ಚೇಂಜಿಗೆ ನಿಗದಿತ ಸಮಯದ ಒಳಗೆ ಮತ್ತು ಬೆಂಬಲದ ದಾಖಲೆಗಳ ಜೊತೆಗೆ ಕ್ಲೇಮನ್ನು ಸಲ್ಲಿಸಬೇಕು.
17. ಸ್ಟಾಕ್ ಬ್ರೋಕರ್, ತಪ್ಪಿದರೆ ಅಥವಾ ದಿವಾಳಿಯಾದರೆ ಸ್ಟಾಕ್ ಬ್ರೋಕರನಲ್ಲಿ ಜಮಾ ಮಾಡಿದ ಹಣ ಮತ್ತು/ಅಥವಾ ಸೆಕ್ಯುರಿಟಿಗಳಿಗೆ ಸಿಗುವ ರಕ್ಷಣೆಯ ಬಗ್ಗೆ ಮತ್ತು ಎಷ್ಟು ಹಣ/ಸೆಕ್ಯುರಿಟಿ ನಿಮಗೆ ವಾಪಸಾಗಬಹುದು ಎಂಬದರ ಬಗ್ಗೆ ಚೆನ್ನಾಗಿ ತಿಳಿದುಕೊಳ್ಳಿ. ಕಾಲ ಕಾಲಕ್ಕೆ ಜಾರಿಯಲ್ಲಿರುವ ಸಂಬಂಧ ಪಟ್ಟ ಸ್ಟಾಕ್ ಎಕ್ಸ್ ಚೇಂಜ್‌ನ ಬೈಲಾಗಳು ಮತ್ತು ನಿಬಂಧನೆಗಳು ಮತ್ತು ಹೂಡಿಕೆದಾರರ ಸಂರಕ್ಷಣಾ ನಿಧಿ ಯೋಜನೆಗಳು ಈ ಬಗ್ಗೆ ಹೇಳುವುದನ್ನು ತಿಳಿದುಕೊಳ್ಳಿ.

## ವ್ಯಾಜ್ಯಗಳು/ದೂರುಗಳು

18. ಗಮನಿಸಿ ಮಧ್ಯಸ್ಥಿಕೆ ಕಾರ್ಯವಿಧಾನಗಳು, ಬ್ರೋಕರುಗಳ ವಿರುದ್ಧ ದಂಡ ಪ್ರಕ್ರಿಯೆ ಮತ್ತು ಸ್ಟಾಕ್ ಬ್ರೋಕರುಗಳ ವಿರುದ್ಧ ಹೂಡಿಕೆದಾರರ ದೂರುಗಳ ವಿವರಗಳನ್ನು ಸಂಬಂಧ ಪಟ್ಟ ಸ್ಟಾಕ್ ಎಕ್ಸ್ ಚೇಂಜಿನ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿರುತ್ತದೆ.
19. ಸಂಬಂಧ ಪಟ್ಟ ಸ್ಟಾಕ್ ಬ್ರೋಕರ್/ಸಬ್-ಬ್ರೋಕರ್ ನಿಮ್ಮ ವಿಷಯ/ಸಮಸ್ಯೆ/ದೂರನ್ನು ಪರಿಗಣಿಸುತ್ತಿಲ್ಲವಾದರೆ ನೀವು ವಿಷಯವನ್ನು ಸಂಬಂಧಪಟ್ಟ ಸ್ಟಾಕ್ ಎಕ್ಸ್ ಚೇಂಜಿಗೆ ಒಯ್ಯಬಹುದು. ಅಲ್ಲಿಯೂ ನಿಮಗೆ ತೃಪ್ತಿಯಾಗದಿದ್ದರೆ SEBIಗೆ ವಿಷಯವನ್ನು ದಾಟಿಸಬಹುದು.
20. ದೂರುಗಳನ್ನು ನೋಂದಾಯಿಸಲು ದೂರು ಪರಿಹಾರ ವಿಭಾಗ/ಸಮನ್ವಯ ಅಧಿಕಾರಿಯ ಪ್ರತ್ಯೇಕ ಇಮೇಲ್ ಐಡಿಯನ್ನು ನಿಯೋಜಿಸಬೇಕು ಎಂದು SEBI ಎಲ್ಲ ಸ್ಟಾಕ್ ಬ್ರೋಕರುಗಳಿಗೆ/ಸಬ್-ಬ್ರೋಕರುಗಳಿಗೆ ಕಡ್ಡಾಯ ಮಾಡಿರುತ್ತದೆ.